ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 20-12-1992.

# *ಅಜ್ಞಾಕಾರಿಯೇ ಸರ್ವ ಶಕ್ತಿಗಳಿಗೆ ಅಧಿಕಾರಿ*

(आज्ञाकारी ही सर्व शक्तियों के अधिकारी)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಸರ್ವಶಕ್ತಿವಂತರಾದ ಬಾಪ್‌ದಾದಾ ತನ್ನ ಮಾಸ್ಟರ್ ಸರ್ವಶಕ್ತಿವಂತರಾದ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಸರ್ವಶಕ್ತಿಗಳ ದಾತ ಬಾಪ್‌ದಾದಾರವರು ತಮ್ಮ ಶಕ್ತಿಸೇನೆಯನ್ನು ನೋಡುತ್ತಿದ್ದಾರೆ. ಸರ್ವಶಕ್ತಿವಂತ ತಂದೆ ಎಲ್ಲಾ ಬ್ರಾಹ್ಮಣ ಆತ್ಮರಿಗೆ ಸರ್ವ ಶಕ್ತಿಗಳ ಆಸ್ತಿಯನ್ನು ಸಮಾನವಾಗಿ ಕೊಟ್ಟಿದ್ದಾರೆ. ಕೆಲವರಿಗೆ ಕಡಿಮೆ, ಕೆಲವರಿಗೆ ಹೆಚ್ಚು-ಈ ಅಂತರವನ್ನು ಇಟ್ಟಿಲ್ಲ. ಎಲ್ಲರಿಗೂ ಒಬ್ಬರ ಮುಖಾಂತರ, ಒಬ್ಬರ ಜೊತೆ-ಜೊತೆಯಾಗಿ ಒಂದೇ ಸಮಾನವಾಗಿ ಶಕ್ತಿಗಳನ್ನು ಕೊಟ್ಟಿದ್ದಾರೆ. ಅಂದಾಗ ಒಂದೇ ಸಮಾನ ಸಿಕ್ಕಿದ್ದರೂ ಸಹ ಅಂತರ ಏಕೆ? ಎಂದು ಫಲಿತಾಂಶವನ್ನು ನೋಡುತ್ತಿದ್ದಾರೆ. ಕೆಲವರು ಸರ್ವ ಶಕ್ತಿಸಂಪನ್ನರಾಗಿದ್ದಾರೆ ಮತ್ತೆ ಕೆಲವರು ಕೇವಲ ಶಕ್ತಿಸಂಪನ್ನರಾಗಿದ್ದಾರೆ ಆದರೆ ಸರ್ವಶಕ್ತಿಗಳಿಂದಲ್ಲ. ಕೆಲವರು ಸದಾ ಶಕ್ತಿಸ್ವರೂಪರಾಗಿದ್ದಾರೆ. ಕಲವರು ಆಗಾಗ ಶಕ್ತಿಸ್ವರೂಪರಾಗಿದ್ದಾರೆ. ಕೆಲವು ಬ್ರಾಹ್ಮಣರು ತಮ್ಮ ಸರ್ವ ಶಕ್ತಿವಂತ ಅಧಿಕಾರದಿಂದ ಯಾವ ಸಮಯ, ಯಾವ ಶಕ್ತಿಯನ್ನು ಆರ್ಡರ್ ಮಾಡುತ್ತಾರೆಯೋ ಆ ಶಕ್ತಿಯು ರಚನೆ ರೂಪದಲ್ಲಿ ಮಾಸ್ಟರ್ ರಚಯಿತನ ಬಳಿ ಬರುತ್ತದೆ. ಆದೇಶ ಕೊಟ್ಟರೆ ಅದು ಸನ್ಮುಖದಲ್ಲಿ ಬಂದುಬಿಡುತ್ತದೆ

ಆದರೆ ಕೆಲವರು ಆದೇಶವನ್ನು ಕೊಟ್ಟರೆ ಸಮಯಾನುಸಾರ ಶಕ್ತಿಗಳು ಬರುವುದಿಲ್ಲ. 'ಆಗಲಿ ಪ್ರಭು' ಎಂದು ಒಪ್ಪಿ ಬರುವುದಿಲ್ಲ. ಇದರ ಕಾರಣವೇನು? ಸರ್ವಶಕ್ತಿವಂತರಾದ ತಂದೆಯನ್ನು ಪ್ರಭು ಎಂದು ಕೂಡ ಕರೆಯುತ್ತಾರೆ. ಯಾರಾದರೆ ಪ್ರತಿಯೊಂದು ಹೆಜ್ಜೆ, ಪ್ರತಿಯೊಂದು ಸಮಯದಲ್ಲಿ ತಂದೆಯ ಶ್ರೀಮತವನ್ನು ಆಗಲಿ ಪ್ರಭು! ಎಂದು ಹೇಳುತ್ತಾರೆಯೋ ಪ್ರತಿಯೊಂದು ಆಜ್ಞೆಯನ್ನು ಚಿತ್ತ! ಪ್ರಭು ಚಿತ್ತ! ಎನ್ನುತ್ತಾ ಪ್ರತ್ಯಕ್ಷ ಮಾಡುತ್ತಾರೆಯೋ ಅಂತೆಯೇ ಚಿತ್ತ! ಪ್ರಭು ಚಿತ್ತ! ಎಂಬುವವರ ಮುಂದೆ ಪ್ರತಿಯೊಂದು ಶಕ್ತಿ ಕೂಡ ಚಿತ್ತ! ಮಾಸ್ಟರ್ ಪ್ರಭು ಚಿತ್ತ! ಎಂದು ಕಾರ್ಯ ಮಾಡುತ್ತವೆ.

ಕೆಲ ಆತ್ಮರು ಶ್ರೀಮತ ಅಥವಾ ಆಜ್ಞೆಯನ್ನು ಸಹಜವಾಗಿ ಪಾಲನೆ ಮಾಡಲು ಸಾಧ್ಯವಿದ್ದರೆ ಅವರು ಮಾಡುತ್ತಾರೆ ಮತ್ತು ಯಾರಿಗೆ ಕಷ್ಟ ಎನಿಸುತ್ತದೆಯೋ ಅವರು ಮಾಡಲು ಸಾಧ್ಯವಿಲ್ಲ. ಸ್ವಲ್ಪ ಮಾಡುತ್ತಾರೆ. ಸ್ವಲ್ಪ ಮಾಡುವುದಿಲ್ಲ. ಕೆಲವೊಮ್ಮೆ ಆಗಲಿ ಪ್ರಭು ಎಂದು ಮಾಡುತ್ತಾರೆ. ಕೆಲವೊಮ್ಮೆ ಇಲ್ಲ. ಇದರ ಪ್ರತ್ಯಕ್ಷಫಲ ಅಥವಾ ಪ್ರತ್ಯಕ್ಷ ಪ್ರಮಾಣದ ರೂಪದಲ್ಲಿ ಇಂತಹ ಆತ್ಮರ ಮುಂದೆ ಸರ್ವಶಕ್ತಿಗಳೂ ಸಹ ಸಮಯ ಪ್ರಮಾಣ ಹಾಜರಾಗುವುದಿಲ್ಲ. ಹೇಗೆ ಯಾವುದಾದರೂ ಪರಿಸ್ಥಿತಿಯ ಪ್ರಮಾಣ ಅಳವಡಿಸುಕೊಳ್ಳುವ ಶಕ್ತಿ ಬೇಕೆಂದರೆ ನಮಗೆ ಅವಶ್ಯವಾಗಿ ಅಳವಡಿಸುಕೊಳ್ಳುವ ಶಕ್ತಿಯ ಮುಖಾಂತರ ಈ ಪರಿಸ್ಥಿತಿಯನ್ನು ಪಾರು ಮಾಡುತ್ತೇವೆ. ವಿಜಯಿಗಳಾಗುತ್ತೇವೆ ಎಂದು ಸಂಕಲ್ಪ ಮಾಡುತ್ತಾರೆ. ಆದರೆ ಏನು ಆಗುತ್ತದೆ? ಎರಡನೆಯ ನಂಬರಿನವರು ಅರ್ಥಾತ್ ಆಗಾಗ ಅಳವಡಿಸಿಕೊಳ್ಳುವ ಶಕ್ತಿಯನ್ನು ಪ್ರಯೋಗ ಮಾಡುತ್ತಾರೆ- ಒಂದುಬಾರಿ ಅಳವಡಿಸಿಕೊಳ್ಳುತ್ತಾರೆ ಆದರೆ ಅಳವಡಿಸಿಕೊಂಡರೂ ಸಹ ಒಂದೆರಡು ಬಾರಿ ಅಳವಡಿಸಿಕೊಳ್ಳಲು ಬಯಸಿದರೂ ಸಹ ಸಾಧ್ಯವಾಗುವುದಿಲ್ಲ. ನಂತರ ಏನು ಯೋಚಿಸುತ್ತಾರೆ? ನಾನು ಯಾರಿಗೂ ಹೇಳಲಿಲ್ಲ, ಅಳವಡಿಸಿಕೊಂಡೆ ಆದರೆ ಅವರು ಜೊತೆಯಲ್ಲಿ ಇದ್ದರು. ಸಹಯೋಗಿಯಾಗಿದ್ದರು, ಸಮೀಪವಿದ್ದರು-ಇವರಿಗೆ ಕೇವಲ ಸೂಚನೆ ಕೊಟ್ಟೆ. ಹೇಳಲಿಲ್ಲ ಕೇವಲ ಸೂಚನೆ ಕೊಟ್ಟೆ. ಯಾವುದೇ ಮಾತನ್ನು ಹೇಳಲು ಬಯಸಲಿಲ್ಲ ಕೇವಲ ಒಂದೆರಡು ಶಬ್ದ ಹೊರಬಂದಿತ್ತು. ಈ ರೀತಿ ಹೇಳುವವರಿಗೆ ಏನು ಹೇಳಲಾಗುವುದು? ಸಮಾವೇಶಗೊಳಿಸುವುದು ಎಂದು ಹೇಳುವುದೇ? 10 ಜನರ ಮುಂದೆ ಅಳವಡಿಸಿಕೊಂಡು ಒಬ್ಬಿಬ್ಬರ ಮುಂದೆ ಅಳವಡಿಸಿಕೊಳ್ಳಲು ಸಾಧ್ಯವಾಗಲಿಲ್ಲ ಅಂದಾಗ ಇಂತಹವರಿಗೆ ಏನು ಹೇಳುವುದು? ಅಳವಡಿಸಿಕೊಳ್ಳುವ ಶಕ್ತಿ ಆದೇಶವನ್ನು ಒಪ್ಪಿತೇ? ನಿಮ್ಮ ಶಕ್ತಿಯಾಗಿದೆ - ತಂದೆಯಿಂದ ವಾರಸತ್ವದ ರೂಪದಲ್ಲಿ ಲಭಿಸಿದೆ ಅಂದಾಗ ತಂದೆಯ ಆಸ್ತಿಯೇ ಮಕ್ಕಳ ಆಸ್ತಿಯಾಗುತ್ತದೆ. ತಮ್ಮ ಶಕ್ತಿ ತಮ್ಮ ಕೆಲಸಕ್ಕೆ ಬರಲಿಲ್ಲವೆಂದರೆ ಇದಕ್ಕೆ ಏನೆಂದು ಹೇಳಲಾಗುತ್ತದೆ? ಆದೇಶವನ್ನು ಒಪ್ಪುವಂತಹವರೋ ಅಥವಾ ಒಪ್ಪದೆ ಇರುವಂತಹವರು ಎಂದು ಹೇಳಲಾಗುತ್ತದೆಯೇ?

ಇಂದು ಬಾಪ್‌ದಾದಾರವರು ಸರ್ವ ಬ್ರಾಹ್ಮಣ ಆತ್ಮರನ್ನು ಎಲ್ಲಿಯತನಕ ಸರ್ವಶಕ್ತಿಗಳ ಅಧಿಕಾರಿ ಆಗಿದ್ದಾರೆಂದು ನೋಡುತ್ತಿದ್ದೆವು. ಒಂದುವೇಳೆ ಅಧಿಕಾರಿಗಳು ಆಗಿಲ್ಲದಿದ್ದರೆ ಆ ಸಮಯಕ್ಕೆ ಪರಿಸ್ಥಿತಿಗಳ ಅಧೀನರಾಗಿಬಿಡಬೇಕಾಗುತ್ತದೆ. ಮಕ್ಕಳು ಯಾವುದೇ ಶಕ್ತಿಯನ್ನು ಸಮಯಕ್ಕೆ ಕಾರ್ಯದಲ್ಲಿ ಉಪಯೋಗಿಸಲು ಆಗದಿದ್ದರೆ ಬಾಪ್‌ದಾದಾರವರಿಗೆ ಎಲ್ಲರಿಗಿಂತ ಹೆಚ್ಚು ದಯೆ ಆ ಸಮಯದಲ್ಲಿ ಬರುತ್ತದೆ. ಆ ಸಮಯದಲ್ಲಿ ಏನು ಮಾಡುತ್ತಾರೆ? ಯಾವುದೇ ಮಾತನ್ನು ಎದುರಿಸುವಾಗ ತಂದೆಯ ಮುಂದೆ ಯಾವ ರೂಪದಲ್ಲಿ ಬರುತ್ತಾರೆ? ಜ್ಞಾನಿ ಭಕ್ತರಾಗಿ ಬರುತ್ತಾರೆ ಭಕ್ತರು ಏನು ಮಾಡುತ್ತಾರೆ? ಭಕ್ತರು ಅದನ್ನು

ಕೊಡು. ಇದನ್ನು ಕೊಡು ಎಂದು ಆಲಾಪನೆ ಮಾಡುತ್ತಾರೆ. ತಂದೆಯಬಳಿ ಓಡಿ ಹೋಗುತ್ತಾರೆ. ತಂದೆಯ ಮೇಲೆ ಅಧಿಕಾರವನ್ನು ಇಡುತ್ತಾರೆ ಆದರೆ ಅವರ ರೂಪ ರಾಯಲ್ ಭಕ್ತರ ರೂಪವಾಗಿರುತ್ತದೆ. ಎಲ್ಲಿ ಅಧಿಕಾರದ ಬದಲು ಜ್ಞಾನಿ ಭಕ್ತರು ಅಥವಾ ರಾಯಲ್ ಭಕ್ತರ ರೂಪದಲ್ಲಿ ಬರುತ್ತಾರೆಯೋ, ಎಲ್ಲಿಯತನಕ ಭಕ್ತಿಯ ಅಂಶವಿರುತ್ತದೆಯೋ, ಭಕ್ತಿಯಫಲ ಸದ್ಗತಿ ಅರ್ಥಾತ್ ಸಫಲತೆ, ಸದ್ಗತಿ ಅರ್ಥಾತ್ ವಿಜಯ ಪ್ರಾಪ್ತಿಯಾಗಲು ಸಾಧ್ಯವಿಲ್ಲ ಏಕೆಂದರೆ ಅಲ್ಲಿ ಭಕ್ತಿಯ ಅಂಶ ಉಳಿದುಬಿಡುತ್ತದೆ ತಾನೆ! ಭಕ್ತಿಯ ಫಲ ಜ್ಞಾನ ಅರ್ಥಾತ್ ಸರ್ವ ಪ್ರಾಪ್ತಿಗಳು ಸಿಗಲು ಸಾಧ್ಯವಿಲ್ಲ, ಸಫಲತೆ ಸಿಗಲು ಸಾಧ್ಯವಿಲ್ಲ. ಭಕ್ತಿ ಅರ್ಥಾತ್ ಪರಿಶ್ರಮ ಜ್ಞಾನ ಅರ್ಥಾತ್ ಪ್ರೀತಿ. ಒಂದುವೇಳೆ ಭಯದ ಅಂಶವಿದ್ದರೆ ಖಂಡಿತ ಪರಿಶ್ರಮ ಪಡಬೇಕಾಗುತ್ತದೆ. ಮತ್ತು ಭಕ್ತಿಯ ರೀತಿ-ಪದ್ಧತಿ ಯಾವಾಗ ಕಷ್ಟವಾಗುತ್ತದೆಯೋ ಆಗ ಭಗವಂತನ ನೆನಪು ಬರುತ್ತದೆ ಇಲ್ಲವೆಂದರೆ ಹುಡುಗಾಟಿಕೆಯಲ್ಲಿ ಇರುತ್ತಾರೆ. ಜ್ಞಾನಿ-ಭಕ್ತರೂ ಸಹ ಏನು ಮಾಡುತ್ತಾರೆ? ಯಾವಾಗಲಾದರೂ ಏನಾದರೂ ವಿಘ್ನ ಬಂದಾಗ ವಿಶೇಷ ನೆನಪು ಮಾಡುತ್ತಾರೆ.

**ಒಂದಾಗಿದೆ - ಸೇವೆಯ ಪ್ರತಿ ಸ್ಮೃತಿಯಲ್ಲಿ ಕುಳಿತುಕೊಳ್ಳುವುದು, ಮತ್ತೊಂದಾಗಿದೆ ಸ್ವಯಂನ ಬಲಹೀನತೆಗಳನ್ನು ತುಂಬಿಕೊಳ್ಳಲು ಸ್ಮೃತಿಯಲ್ಲಿ ಕುಳಿತುಕೊಳ್ಳುವುದು ಎರಡರಲ್ಲಿ ಅಂತರವಿದೆ. ಹೇಗೆ ವಿಶ್ವದಲ್ಲಿ ಅಶಾಂತಿಯ ವಾಯುಮಂಡಲವು ಇದ್ದಿದ್ದೇ ಆದರೆ ಸೇವೆಯ ಪ್ರತಿ ಸಂಘಟಿತ ರೂಪದಲ್ಲಿ ಸ್ಮೃತಿಯ ಕಾರ್ಯಕ್ರಮ ಮಾಡುತ್ತಾರೆ. ದಾತನಾಗಿ ನೀಡಲು ಮಾಡುತ್ತೀರಿ. ಆದನ್ನು ಬೇಡಲು ಮಾಡುವುದಿಲ್ಲ. ಅನ್ಯರಿಗೆ ಕೊಡಲು ಮಾಡುತ್ತೀರಿ. ಅಂದಾಗ ಅದು ಸೇವೆಯ ಪ್ರತಿಯಾಗಿದೆ**. ಆದರೆ ತಮ್ಮ ಬಲಹೀನತೆಗಳನ್ನು ತುಂಬಿಸಿಕೊಳ್ಳಲು ಆ ಸಮಯಕ್ಕೆ ವಿಶೇಷ ನೆನಪು ಮಾಡುತ್ತೀರೋ ಹಾಗೆಯೇ ಹುಡುಗಾಟಿಗೆಯ ನೆನಪು ಬರುತ್ತದೆ. ನೆನಪು ಇರುತ್ತದೆ ಮರೆಯುವುದಿಲ್ಲ ಆದರೆ ಹುಡುಗಾಟಿಕೆಯಿಂದ ಕೂಡಿರುವಂತಹ ನೆನಪು ಇರುತ್ತದೆ. ನಾವಂತೂ ತಂದೆಯವರಾಗಿಯೇ ಇದ್ದೇವೆ. ಮತ್ತೆ ಯಾರಾಗಿದ್ದೇವೆ? ಯಥಾರ್ಥ ಶಕ್ತಿಶಾಲಿ ನೆನಪಿನ ಪ್ರತ್ಯಕ್ಷ ಪ್ರಮಾಣ, ಸಮಯ ಪ್ರಮಾಣ ಶಕ್ತಿಯು ಹಾಜರಾಗಬೇಕು. ನಾನು ನೆನಪಿನಲ್ಲೇ ಇರುತ್ತೇನೆಂದು ಯಾರು ಎಷ್ಟಾದರೂ ಹೇಳಲಿ ಆದರೆ ನೆನಪಿನ ಸ್ವರೂಪದಲ್ಲಿ ಸಫಲತೆಯಿದೆ. ಯಾವ ಸಮಯದಲ್ಲಿ ನೆನಪು ಮಾಡಲು ಕುಳಿತುಕೊಳ್ಳುತ್ತೇವೆಯೋ ಆ ಸಮಯದಲ್ಲಿ ಖುಷಿಯೂ ಸಹ ಅನುಭವವಾಗುತ್ತದೆ, ಶಕ್ತಿಯೂ ಸಹ ಅನುಭವ ಆಗುತ್ತದೆ ಮತ್ತೆ ಯಾವಾಗ ಕರ್ಮದಲ್ಲಿ, ಸಂಬಂಧ-ಸಂಪರ್ಕದಲ್ಲಿ ಬರುತ್ತಾರೆಯೋ ಆ ಸಮಯಕ್ಕೆ ಸದಾ ಸಫಲತೆ ಸಿಗುವುದಿಲ್ಲ. ಅಂದಾಗ ಅವರಿಗೆ ಕರ್ಮಯೋಗಿ ಎಂದು ಕರೆಯಲಾಗುವುದಿಲ್ಲ. ಶಕ್ತಿಗಳು ಶಸ್ತ್ರವಾಗಿದೆ ಮತ್ತು ಶಸ್ತ್ರ ಯಾವ ಸಮಯಕ್ಕಾಗಿ? 'ಶಸ್ತ್ರ ಸದಾ ಸಮಯಾನುಸಾರ ಕಾರ್ಯಕ್ಕೆ ಉಪಯೋಗಿಸಲಾಗುತ್ತದೆ.

**ಯಾಥಾರ್ಥ ಸ್ಮೃತಿ ಅರ್ಥಾತ್ ಸರ್ವ ಶಕ್ತಿಸಂಪನ್ನ, ಸದಾ ಶಕ್ತಿಶಾಲಿ ಶಸ್ತ್ರವಿರಬೇಕು. ಪರಿಸ್ಥಿತಿ ರೂಪಿ ಶತ್ರು ಬಂದಾಗ ಶಸ್ತ್ರ ಕೆಲಸಕ್ಕೆ ಬರಲಿಲ್ಲವೆಂದರೆ ಇವರಿಗೆ ಏನು ಹೇಳುತ್ತಾರೆ? ಶಕ್ತಿಶಾಲಿ ಅಥವಾ ಶಸ್ತ್ರಧಾರಿ ಎಂದು ಹೇಳುತ್ತಾರೆಯೇ? ಪ್ರತಿಯೊಂದು ಕರ್ಮದಲ್ಲಿ ಸ್ಮೃತಿ ಅರ್ಥಾತ್ ಸಫಲತೆ ಇರಬೇಕು. ಇವರಿಗೆ ಕರ್ಮಯೋಗಿ ಎಂದು ಕರೆಯುತ್ತಾರೆ. ಕೇವಲ ಕುಳಿತುಕೊಂಡು ಯೋಗ ಮಾಡುವವರಲ್ಲ. ತಮ್ಮ ಯೋಗದ ಹೆಸರು ಕುಳಿತಿದ್ದ ಹಾಗೆ ಮಾಡುವುದು ಎಂದೋ ಅಥವಾ**

**ಕರ್ಮಯೋಗಿ ಎಂಬ ಹೆಸರಿದೆಯೋ? ಕರ್ಮಯೋಗಿಯಲ್ಲವೇ. ನಿರಂತರ ಕರ್ಮವಿದೆ ಮತ್ತು ನಿರಂತರ ಕರ್ಮಯೋಗಿಗಳು ಹೇಗೆ ಕರ್ಮದ ವಿನಃ ಒಂದು ಸೆಕೆಂಡೂ ಸಹ ಇರಲು ಸಾಧ್ಯವಿಲ್ಲ. ಮಲಗಿರಬಹುದು ಅದೂ ಸಹ ಮಲಗುವ ಕರ್ಮವನ್ನು ಮಾಡುತ್ತಿದ್ದೀರಲ್ಲವೇ. ಹೇಗೆ ಕರ್ಮದ ವಿನಃ ಇರಲು ಸಾಧ್ಯವಿಲ್ಲವೋ ಹಾಗೆಯೇ ಪ್ರತಿ ಕರ್ಮ ಯೋಗದ ವಿನಃ ಮಾಡಲು ಸಾಧ್ಯವಿಲ್ಲ. ಇದಕ್ಕೆ ಕರ್ಮಯೋಗಿ ಎಂದು ಕರೆಯಲಾಗುತ್ತದೆ.** ಮಾತೇ ಈ ರೀತಿ ಇತ್ತಲ್ಲವೇ ಎಂದು ತಿಳಿಯಬೇಡಿ. ಪರಿಸ್ಥಿತಿಯೇ ಆ ರೀತಿ ಇತ್ತು, ಸಮಸ್ಯೆಯೇ ಆ ರೀತಿ ಇತ್ತು, ವಾಯುಮಂಡಲ ಈ ರೀತಿ ಇತ್ತು, ಇದು ಶತ್ರುವಾಗಿದೆ. ಶತ್ರು ಬಂದ ಸಮಯದಲ್ಲಿ ಖಡ್ಗವನ್ನು ಬಳಸಲು ಸಾಧ್ಯವಾಗಲಿಲ್ಲ. ಖಡ್ಗ ಕೆಲಸಕ್ಕೆ ಬರಲಿಲ್ಲ. ಖಡ್ಗವನ್ನು ಕಾರ್ಯದಲ್ಲಿ ಉಪಯೋಗಿಸಲು ಆಗಲಿಲ್ಲ ಅಥವಾ ಖಡ್ಗ ನೆನಪಿಗೇ ಬರಲಿಲ್ಲ ಅಥವಾ ಖಡ್ಗ ಕೆಲಸವನ್ನೇ ಮಾಡಲಿಲ್ಲ- ರೀತಿ ಹೇಳುವವರಿಗೆ ಏನೆಂದು ಹೇಳಲಾಗುತ್ತದೆ. ಶಕ್ತಿಸೇನೆ ಆಗಿದ್ದೀರಾ. ಸೈನ್ಯದ ಶಕ್ತಿ ಏನಾಗಿರುತ್ತದೆ? ಶಸ್ತ್ರ. ಮತ್ತು ಶಸ್ತ್ರ ಸರ್ವಶಕ್ತಿಗಳಾಗಿವೆ. ಅಂದಾಗ ಫಲಿತಾಂಶವನ್ನು ಏನು ನೋಡಿದೆವು. ಹೆಚ್ಚಿನ ರೂಪದಲ್ಲಿ ಸದಾ ಸಮಯದಲ್ಲಿ ಸರ್ವಶಕ್ತಿಗಳನ್ನು ಆದೇಶದಂತೆ ನಡೆಸುವುದರಲ್ಲಿ ಬಲಹೀನರಾಗಿ ಕಂಡು ಬಂದರು. ತಿಳಿದಿದೆ ಆದರೆ ಸಫಲತಾ ಸ್ವರೂಪದಲ್ಲಿ ಸಮಯ ಪ್ರಮಾಣ ಶಕ್ತಿಹೀನರಾಗುತ್ತಾರೆ. ಅಥವಾ ಸ್ವಲ್ಪ ಅಸಫಲತೆಯ ಅನುಭವ ಮಾಡಿ ತಕ್ಷಣ ಸಫಲತೆಯ ಕಡೆ ಹೋಗುತ್ತಾರೆ. ಅಂದಾಗ ಮೂರು ಪ್ರಕಾರದವರನ್ನು ನೋಡಿದ್ದೇ

1.ಕೆಲವರು ಇದು ಸರಿಯಲ್ಲ ಇದನ್ನು ಮಾಡಬಾರದು ಎಂಬುದನ್ನು ಆ ಸಮಯದಲ್ಲಿ ಬುದ್ಧಿಯ ಮೂಲಕ ತಿಳಿಯುತ್ತಾರೆ. ಆದರೆ ಆ ಸಮಯದಲ್ಲಿ ಅದನ್ನು ಶಕ್ತಿಶಾಲಿ ರೂಪದಲ್ಲಿ ಬದಲಾವಣೆ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.

2.ಕೆಲವರು ತಿಳಿದುಕೊಳ್ಳುತ್ತಾರೆ. ಆದರೆ ತಿಳಿದುಕೊಂಡರೂ ಸಹ ಸಮಯ ಅಥವಾ ಸಮಸ್ಯೆ ಪೂರ್ಣವಾದ ನಂತರ ಯೋಚನೆ ಮಾಡುತ್ತಾರೆ. ಅವರು ಸ್ವಲ್ಪ ಸಮಯದ ನಂತರ ಯೋಚಿಸುತ್ತಾರೆ. ಇವರು ಪೂರ್ಣವಾದ ನಂತರ ಯೋಚಿಸುತ್ತಾರೆ.

3.ಇದು ತಪ್ಪು ಎನ್ನುವುದನ್ನೇ ಅನುಭವ ಮಾಡುವುದಿಲ್ಲ. ಸದಾ ತನ್ನನ್ನು ಸರಿ ಎಂದೇ ಸಿದ್ಧ ಮಾಡುತ್ತಾರೆ ಅರ್ಥಾತ್ ಸತ್ಯತೆಯನ್ನು ಅನುಭವ ಮಾಡುವ ಶಕ್ತಿಯಿಲ್ಲ. ಅಂದಾಗ ನಾನು ಯಾರು ಎನ್ನುವುದನ್ನು ತಮ್ಮನ್ನು ತಾವೇ ಪರಿಶೀಲನೆ ಮಾಡಿಕೊಳ್ಳಿ.

ಬಾಪ್‌ದಾದಾರವರು ವರ್ತಮಾನ ಸಮಯದ ಪ್ರಮಾಣ ಸಹಜ ಸಫಲತೆಯನ್ನು ಯಾವ ಮಕ್ಕಳು ಪ್ರಾಪ್ತಿ ಮಾಡಿಕೊಂಡಿದ್ದಾರೆ ಎಂದು ನೊಡಿತ್ತಿದ್ದಾರೆ. ಅದರಲ್ಲೂ ಸಹ ಅಂತರವಿದೆ. ಮೊದಲನೆಯದಾಗಿ ಸಹಜ ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳುವವರು ಮತ್ತು ಎರಡನೆಯವರು ಪರಿಶ್ರಮ ಮತ್ತು ಸಹಜ ಅದೆರಡರ ನಂತರ ಸಫಲತೆಯನ್ನು ಪಡೆಯುವಂತಹವರು, ಯಾರು ಸಹಜ ಮತ್ತು ಸದಾ ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾರೆಯೋ ಅವರ ಮೂಲ ಆಧಾರ ಏನನ್ನು ನೋಡಿದೆವು? ಯಾವ ಆತ್ಮರು ಸದಾ ಸ್ವಯಂನ್ನು ನಿರ್ಮಾಣಚಿತ್ತದ ವಿಶೇಷತೆಯಿಂದ ನಡೆಸುತ್ತಿರುತ್ತಾರೆಯೋ ಅವರೇ ಸಹಜ ಸಫಲತೆಯನ್ನು ಪಡೆಯುತ್ತಾ ಬಂದಿದ್ದಾರೆ. ನಿರ್ಮಾಣ ಶಬ್ದ ಒಂದು ಆದರೆ

ನಿರ್ಮಾಣ ಸ್ಥಿತಿಯ ವಿಸ್ತಾರ ಮತ್ತು ನಿರ್ಮಾಣ ಸ್ಥಿತಿ ಸಮಯ ಪ್ರಮಾಣ ಅನೇಕ ಪ್ರಕಾರದಿಂದ ಕೂಡಿರುತ್ತದೆ. ಇದರ ಬಗ್ಗೆ ಮತ್ತೆ ಎಂದಾದರೂ ತಿಳಿಸುತ್ತೇವೆ. ನಿರ್ಮಾಣರಾಗುವುದೇ ಸ್ವಮಾನದಲ್ಲಿ ಇರುವುದು ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಇದು ಸರ್ವರ ಗೌರವವನ್ನು ಪ್ರಾಪ್ತಿ ಮಾಡಿಕೊಳ್ಳುವ ಸಹಜ ಸಾಧನವಾಗಿದೆ. ನಿರ್ಮಾಣರಾಗುವುದು, ಬಾಗುವುದಲ್ಲ ಆದರೆ ಸರ್ವರನ್ನು ತನ್ನ ವಿಶೇಷತೆ ಮತ್ತು ಪ್ರೀತಿಯಲ್ಲಿ ಬಾಗಿಸುವುದು. ತಿಳಿಯಿತೇ?

ಎಲ್ಲರೂ ಫಲಿತಾಂಶವನ್ನು ಕೇಳಿದಿರಿ. ಸಮಯವು ಇವರು ಏನು ಮಾಡುತ್ತಿದ್ದಾರೆ? ಎಂದು ತಮ್ಮ ನಿರೀಕ್ಷಣೆಯನ್ನು ಮಾಡುತ್ತಿದೆ ಆದರೆ ನೀವು ಸಮಯವನ್ನು ನಿರೀಕ್ಷಿಸುತ್ತಿದ್ದೀರಾ? ಮಾಲಿಕನ ಬಾಲಕರಾಗಿದ್ದೀರಲ್ಲವೇ? ಅಂದಾಗ ಸಮಯ ಈ ಮಾಲಿಕ ನನ್ನನ್ನು ಯಾವಾಗ ಪರಿವರ್ತನೆ ಮಾಡುತ್ತಾರೆ ಎಂದು ತಮ್ಮ ನಿರೀಕ್ಷಣೆ ಮಾಡುತ್ತಿದೆ. ಅದು ನಿರೀಕ್ಷಿಸುತ್ತಿದೆ. ತಾವು ಸಿದ್ಧರಾಗಬೇಕು. ನಿರೀಕ್ಷಣೆ ಮಾಡಬಾರದು. ಸರ್ವರಿಗೆ ಸಂದೇಶವನ್ನು ಕೊಡುವಂತಹ ಮತ್ತು ಸಮಯವನ್ನು ಸಂಪನ್ನ ಮಾಡುವ ತಯಾರಿಯನ್ನು ಮಾಡಿಕೊಳ್ಳಿ. ಯಾವಾಗ ಈ ಎರಡೂ ಕಾರ್ಯಗಳು ಸಂಪನ್ನವಾಗುತ್ತದೆಯೋ ಆಗ ಸಮಯದ ನಿರೀಕ್ಷಣೆ ಪೂರ್ಣವಾಗುತ್ತದೆ ಅಂದಾಗ ಈ ರೀತಿ ಸಿದ್ಧತೆಯನ್ನು ಯಾವಾಗ ಮಾಡುತ್ತೀರಿ? ಎಷ್ಟು ವೇಗದಿಂದ? ಅಥವಾ ವೇಗವಾಗಿ ಹೋಗುತ್ತಾ-ಹೋಗುತ್ತಾ ಸುಸ್ತಾಗುತ್ತೀರಾ ಅಥವಾ ಆರಾಮ್ ಮಾಡುತ್ತೀರಾ? ಮಾಡುತ್ತಿದ್ದೀರಿ- ಇದಂತೂ ಡ್ರಾಮದ ಬಂಧನದಲ್ಲಿ ಬಂಧಿತವಾಗಿಯೇ ಇದೆ. ಆದರೆ ಗತಿ ಏನಾಗಿದೆ, ಇದನ್ನು ಪರಿಶೀಲನೆ ಮಾಡಿಕೊಳ್ಳಿ. ಸೇವೆ ಆಗುತ್ತಿದೆ. ಪುರುಷಾರ್ಥ ಮಾಡುತ್ತಿದ್ದೇವೆ. ಮುಂದುವರೆಯುತ್ತಿದೆ- ಇದಂತೂ ಸರಿ. ಅಂದಾಗ ಈಗ ತೀವ್ರತೆಯನ್ನು ಪರಿಶೀಲನೆ ಮಾಡಿಕೊಳ್ಳಿ. ಕೇವಲ ಚಲನೆಯನ್ನು ಪರಿಶೀಲನೆ ಮಾಡಿಕೊಳ್ಳಬೇಡಿ. ತೀವ್ರತೆಯ ಗತಿಯನ್ನು ಪರಿಶೀಲನೆ ಮಾಡಿಕೊಳ್ಳಿ. ತಿಳಿಯಿತೇ? ಎಲ್ಲರೂ ತಮ್ಮ ಕಾರ್ಯವನ್ನು ಮಾಡುತ್ತಿದ್ದೀರಲ್ಲವೇ. ಒಳ್ಳೆಯದು.

**ನಾಲ್ಕಾರು ಕಡೆ ಸದಾ ತಂದೆಯ ಮುಂದೆ ಆಗಲಿ ಪ್ರಭು ಎನ್ನುವವರು, ಸದಾ ಮಾಸ್ಟರ್ ಸರ್ವಶಕ್ತಿವಂತರಾಗಿ ಸರ್ವ ಶಕ್ತಿಗಳನ್ನು ಸ್ವಯಂನ ಆದೇಶದಂತೆ ನಡೆಸುವಂತಹವರು, ಸರ್ವಶಕ್ತಿಗಳು ಆಗಲಿ ಪ್ರಭು ಎನ್ನುವ ಪಾರ್ಟ್ ಮಾಡಿಸುವಂತಹ-ಅಂತಹ ಸದಾ ಸಫಲತಾಮೂರ್ತಿ ಆತ್ಮರಿಗೆ, ಸದಾ ಪ್ರತಿಯೊಂದು ಕರ್ಮದಲ್ಲಿ ನೆನಪಿನ ಸ್ವರೂಪವನ್ನು ಅನುಭವ ಮಾಡಿ ಮಾಡಿಸುವಂತಹ ಅನುಭವೀ ಆತ್ಮರಿಗೆ, ಸದಾ ಪ್ರತಿಯೊಂದು ಕರ್ಮದಲ್ಲಿ, ಸಂಪರ್ಕದಲ್ಲಿ ನಿಮಿತ್ತರಾಗಿ ವಿಜಯಿರತ್ನರಾಗುವಂತಹ ಸಹಜ ಸಫಲತಾ ಮೂರ್ತಿ ಶ್ರೇಷ್ಠ ಆತ್ಮರಿಗೆ, ಬಾಪ್‌ದಾದಾರವರ ಪ್ರೀಯಸ್ಮೃತಿಗಳು ಹಾಗೂ ನಮಸ್ತೆ.**

**ಅವ್ಯಕ್ತ ಬಾಪ್ ದಾದಾರವರ ಪರ್ಸನಲ್ ಮಾತುಕತೆ.**

ಸಾಧಾರಣ ಕರ್ಮದಲ್ಲೂ ಸಹ ಶ್ರೇಷ್ಠ ಸ್ಥಿತಿಯ ಹೊಳಪು ತೋರಿಸುವಂತಹವರು ಫಾಲೋ ಫಾದರ್ ಮಾಡಿರಿ. ಸದಾ ಸಂಗಮಯುಗೀ ಪುರುಷೋತ್ತಮ ಆತ್ಮನಾಗಿದ್ದೇನೆ ಎಂಬ ಅನುಭವವಾಗುತ್ತದೆಯೇ? ಸಂಗಮಯುಗದ ಹೆಸರಿನಲ್ಲಿ ಇದೇ ಪುರುಷೋತ್ತಮ ಅರ್ಥಾತ್ ಪುರುಷರಿಗಿಂತ ಉತ್ತಮ ಪುರುಷರಾಗುವಂತಹ ಯುಗ. ಎಂದ ಮೇಲೆ ಸಂಗಮಯುಗೀ

ಆಗಿದ್ದೀರಾ? ನೀವೆಲ್ಲರು ಪುರುಷೋತ್ತಮರಾಗಿದ್ದೀರಲ್ಲವೇ? ಆತ್ಮ ಪುರುಷ ಆಗಿದೆ ಹಾಗೂ ಶರೀರ ಪ್ರಕೃತಿ ಆಗಿದೆ ಎಂದ ಮೇಲೆ ಪುರುಷೋತ್ತಮ ಅರ್ಥಾತ್ ಉತ್ತಮ ಆಗಿದ್ದೇನೆ. ಎಲ್ಲರಿಗಿಂತಲೂ ಉತ್ತಮ ಪುರುಷೋತ್ತಮ ಯಾರು?(ಬ್ರಹ್ಮಾ ಬಾಬಾ) ಆದ್ದರಿಂದಲೇ ಬ್ರಹ್ಮನನ್ನು ಆದಿದೇವ ಎಂದು ಹೇಳಲಾಗುತ್ತದೆ. "ಫರಿಶ್ತಾ" - ಬ್ರಹ್ಮಾ" ಸಹ ಉತ್ತಮರಾಗಿ ಬಿಟ್ಟರು ಹಾಗೂ ಭವಿಷ್ಯದಲ್ಲಿ ದೇವಾತ್ಮ ಆಗುವ ಕಾರಣ ಪುರುಷೋತ್ತಮರಾಗಿ ಬಿಟ್ಟರು. - ಲಕ್ಷ್ಮಿ ನಾರಾಯಣರಿಗೂ ಪುರುಷೋತ್ತಮ ಆತ್ಮರೆಂದು ಹೇಳುತ್ತಾರೆ. ಹಾಗಾದರೆ ಪುರುಷೋತ್ತಮ ಯುಗವಾಗಿದೆ. ನಾನು ಆತ್ಮ ಪುರುಷೋತ್ತಮ, ಪುರುಷೋತ್ತಮ ಆತ್ಮರ ಕರ್ತವ್ಯವೂ ಸಹ ಸರ್ವಶ್ರೇಷ್ಠವಾಗಿದೆ. ಎದ್ದಿರಿ, ತಿಂದಿರಿ, ಕುಡಿದಿರಿ, ಕೆಲಸ ಮಾಡಿದಿರಿ. ಇವೆಲ್ಲವೂ ಸಾಧಾರಣ ಕರ್ಮವಲ್ಲ. ಸಾಧಾರಣ ಕರ್ಮ ಮಾಡುತ್ತಲೂ ಶ್ರೇಷ್ಠ ಸ್ಥಿತಿಯಿರಲಿ. ಯಾರಾದರೂ ನೋಡುತ್ತಲೇ ಅನುಭವ ಮಾಡಲಿ ಇವರು ಸಾಧಾರಣ ವ್ಯಕ್ತಿಯಲ್ಲ. ಎಲ್ಲಿ ಅಸಲಿ ವಜ್ರವಿರುತ್ತದೆ ಎಂದರೆ ಎಷ್ಟೇ ಧೂಳಿನಲ್ಲಿ ಅಡಗಿದ್ದರೂ ಅದು ತನ್ನ ಹೊಳಪಿನಿಂದ ಅವಶ್ಯವಾಗಿ ಕಾಣಿಸುತ್ತದೆ. ಮುಚ್ಚಿಡಲು ಸಾಧ್ಯವಿಲ್ಲ. ಹಾಗಾದರೆ ನಿಮ್ಮ ಜೀವನ ವಜ್ರ ಸಮಾನ ಆಗಿದೆಯಲ್ಲದೇ.

ಯಾವುದೇ ವಾತಾವರಣವಿರಲಿ, ಯಾವುದೇ ಸಂಘಟನೆಯಲ್ಲಿರಲಿ ಹೇಗೆ ವಜ್ರ ತನ್ನ ಹೊಳಪನ್ನು ಮುಚ್ಚಿಡಲು ಸಾಧ್ಯವಿಲ್ಲವೋ. ಈ ರೀತಿ ಪುರುಷೋತ್ತಮ ಅತ್ಮರ ಶ್ರೇಷ್ಠ ಹೊಳಪು ಎಲ್ಲರಿಗೂ ಅನುಭವವಾಗಬೇಕು. ಈ ರೀತಿ ಇದ್ದೀರಾ ಅಥವಾ ಕಛೇರಿಗೆ ಹೋಗಿ ಕೆಲಸಕ್ಕೆ ಹೋಗಿ ನೀವು ಸಹ ಅದೇ ರೀತಿ ಸಾಧಾರಣವಾಗಿ ಬಿಡುತ್ತೀರಾ. ಈಗ ಗುಪ್ತವಾಗಿದ್ದೀರಿ. ಕೆಲಸವು ಸಾಧಾರಣವಾಗಿದೆ ಆದ್ದರಿಂದ ಪಾಂಡವರನ್ನು ಗುಪ್ತರೂಪದಲ್ಲಿ ತೋರಿಸುತ್ತಾರೆ. ಗುಪ್ತರೂಪದಲ್ಲಿ ರಾಜ್ಯಭಾರ ಮಾಡಲಿಲ್ಲ. ಸೇವೆ ಮಾಡಿದ್ದೀರಿ. ಹಾಗಾದರೆ ಬೇರೆಯವರ ರಾಜ್ಯದಲ್ಲಿ ಸರ್ಕಾರಿ ಉದ್ಯೋಗಿ ಎಂದು ಕರೆಸಿಕೊಳ್ಳುತ್ತೀರಲ್ಲವೇ. ಎಷ್ಟೇ ದೊಡ್ಡ ಆಫೀಸರ್ ಆಗಿರಲಿ ಆದರೆ ಅವರು ಸರ್ವೆಂಟ್ ಎಂದೇ ಕರೆಸಿಕೊಳ್ಳುತ್ತಾರೆ ಎಂದ ಮೇಲೆ ಗುಪ್ತ ರೂಪದಲ್ಲಿ ನೀವೆಲ್ಲರೂ ಸೇವಾಧಾರಿಗಳಾಗಿದ್ದೀರಿ. ಆದರೆ ಸೇವಾಧಾರಿಯಾಗಿಯೂ ಪುರುಷೋತ್ತಮರಾಗಿದ್ದೀರಿ ಎಂದ ಮೇಲೆ ಆ ಹೊಳಪು ಕಾಣಿಸಲಿ. ಹೇಗೆ ಬ್ರಹ್ಮಾಬಾಬಾರವರು ಸಾಧಾರಣ ತನುವಿನಲ್ಲಿ ಇರುತ್ತಲೂ ಪುರುಷೋತ್ತಮರ ಅನುಭವವಾಗುತ್ತಿತ್ತು ಎಲ್ಲರೂ ಕೇಳಿದ್ದೀರಲ್ಲವೇ. ನೋಡಿದ್ದೀರೊ ಅಥವಾ ಕೇಳಿದ್ದೀರೋ? ಈಗಲೂ ಅವ್ಯಕ್ತ ರೂಪದಲ್ಲಿ ನೋಡುತ್ತೀರಿ - ಸಾಧಾರಣದಲ್ಲಿ ಪುರುಷೋತ್ತಮರ ಹೊಳಪಿದೆ ಎಂದ ಮೇಲೆ ಫಾಲೋ ಫಾದರ್ ಮಾಡಿ. ಈ ರೀತಿ ಅಲ್ಲ ಸಾಧಾರಣ ಕಾರ್ಯ ಮಾಡುತ್ತಿದ್ದೀರಿ ಮಾತೆಯರು ಭೋಜನ ತಯಾರಿಸುತ್ತಿದ್ದೀರಿ, ಬಟ್ಟೆ ಒಗೆಯುತ್ತಿದ್ದೀರಿ ಕೆಲಸ ಸಾಧಾರಣವಾಗಿದೆ ಆದರೆ ಸ್ಥಿತಿ ಸಾಧಾರಣವಲ್ಲ. ಸ್ಥಿತಿ ಮಹಾನ್ ಆಗಿರಲಿ, ಈ ರೀತಿ ಇದೆಯೇ? ಅಥವಾ ಸಾಧಾರಣ ಕಾರ್ಯ ಮಾಡುತ್ತಾ ಸಾಧಾರಣರಾಗಿ ಬಿಡುತ್ತೀರೋ? ಬೇರೆಯವರು ಹೇಗೋ ಹಾಗೆ ತಾವು ಆಗಿ ಬಿಡುತ್ತೀರಾ ಇಲ್ಲಾ ತಾನೆ. ಚಹರೆಯ ಮೇಲೆ ಶ್ರೇಷ್ಠ ಜೀವನದ ಪ್ರಭಾವ ಕಾಣಿಸಬೇಕು. ಈ ಚಹರೆಯೇ ದರ್ಪಣವಾಗಿದೆಯಲ್ಲವೇ. ಇದರಿಂದಲೇ ನಿಮ್ಮ ಸ್ಥಿತಿಯನ್ನು ನೋಡಲಾಗುವುದು. ಮಹಾನ್ ಆಗಿದ್ದಾರೆಯೋ ಅಥವಾ ಸಾಧಾರಣರಾಗಿದ್ದಾರೆಯೋ ಇದನ್ನು ಇದೇ ಚಹರೆಯ ದರ್ಪಣದಿಂದ ನೋಡಲಾಗುವುದು. ಸ್ವಯಂ ಸಹ ನೋಡಬಲ್ಲಿರಿ

ಹಾಗೂ ಅನ್ಯರೂ ಸಹ ನೋಡಬಹುದು ಎಂದ ಮೇಲೆ ಈ ರೀತಿ ಅನುಭವ ಮಾಡುತ್ತೀರಾ. ಸದೈವ ಸ್ಮೃತಿ ಹಾಗು ಸ್ಥಿತಿ ಶ್ರೇಷ್ಠವಾಗಿರಲಿ. ಸ್ಥಿತಿ ಶ್ರೇಷ್ಠವಾಗಿದ್ದರೆ ಹೊಳಪು ಆಟೋಮಟಿಕಲಿ ಶ್ರೇಷ್ಠವಾಗಿರುತ್ತದೆ.

ಯಾರು ಸಮಾನ ಸ್ಥಿತಿಯವರಾಗಿದ್ದಾರೆ ಅವರು ಸದಾ ತಂದೆಯ ಜೊತೆಯಲ್ಲಿರುತ್ತಾರೆ. ಶರೀರದಿಂದ ಯಾವುದೇ ಕೋಣೆಯಲ್ಲಿ ಕುಳಿತಿದ್ದರೂ ಹಿಂದೆ ಕುಳಿತಿದ್ದೀರಿ ಆದರೆ ಮನಸ್ಸಿನ ಸ್ಥಿತಿಯಲ್ಲಿ ಜೊತೆ ಇರುತ್ತೀರಿ. ಯಾರು ಸಮಾನರಿದ್ದೀರಿ ಅವರೇ ಜೊತೆಯಲ್ಲಿರುತ್ತೀರಿ. ಸ್ಥೂಲದಲ್ಲಿ ಎದುರುಗಡೆ ಕುಳಿತಿದ್ದರೂ ಸಮಾನರಾಗಿಲ್ಲದೇ ಇದ್ದರೆ ಸದಾ ಜೊತೆಯಲ್ಲಿರಲು ಸಾಧ್ಯವಿಲ್ಲ, ಬದಿಯಲ್ಲಿರುತ್ತೀರಿ. ಹಾಗಾದರೆ ಸಮೀಪ ಇರಬೇಕು ಅರ್ಥಾತ್ ಸಮಾನ ಸ್ಥಿತಿ ಮಾಡಿಕೊಳ್ಳಬೇಕು ಎಂದರೆ ಸದಾ ಬ್ರಹ್ಮ ತಂದೆಯ ಸಮಾನ ಪುರುಷೋತ್ತಮ ಸ್ಥಿತಿಯಲ್ಲಿ ಸ್ಥಿತರಾಗಿರಿ. ಕೆಲವು ಮಕ್ಕಳ ಚಹರೆ ಮತ್ತು ಚಲನೆ ಲೌಕಿಕ ರೀತಿಯಲ್ಲೂ ತಂದೆಯ ಸಮಾನವಾಗಿರುತ್ತದೆ ಎಂದ ಮೇಲೆ ಹೇಳುತ್ತಾರೆ ಇವರಂತೂ ಅವರ ತಂದೆಯಂತೆ ಇದ್ದಾರೆ ಎಂದ ಮೇಲೆ ಇದು ಚಹರೆಯ ಮಾತಂತೂ ಅಲ್ಲ. ಆದರೆ ಚಲನೆಯ ಚಿತ್ರವಾಗಿದೆ. ಹಾಗಾದರೆ ಪ್ರತಿ ಚಲನೆಯಿಂದ ತಂದೆಯ ಅನುಭವವಾಗಲಿ ಇದಕ್ಕೆ ಹೇಳಲಾಗುತ್ತದೆ ತಂದೆಯ ಸಮಾನ, ಹಾಗಾದರೆ ಸಮೀಪವಿರಲು ಬಯಸುತ್ತೀರಾ ಅಥವಾ ದೂರವಿರಲು ಬಯಸುತ್ತೀರಾ. ಈ ಒಂದು ಜನ್ಮದಲ್ಲಿ ಸಂಗಮದಲ್ಲಿ ಸ್ಥಿತಿಯಿಂದ ಯಾರು ಸಮೀಪ ಇರುತ್ತಾರೆ ಅವರೇ ಪರಂಧಾಮದಲ್ಲಿಯೂ ಸಮೀಪ ಇರುತ್ತಾರೆ ಹಾಗೂ ರಾಜಧಾನಿಯಲ್ಲಿಯೂ ಸಮೀಪ ಇರುತ್ತಾರೆ. ಒಂದು ಜನ್ಮದ ಸಮೀಪತೆ ಅನೇಕ ಜನ್ಮಕ್ಕಾಗಿ ಸಮೀಪ ತರಿಸುತ್ತದೆ.

ಪ್ರತೀ ಕರ್ಮದ ಚೆಕಿಂಗ್ ಮಾಡಿಕೊಳ್ಳಿ. ತಂದೆಯ ಸಮಾನವಿದ್ದರೆ ಮಾಡಿ, ಇಲ್ಲವಾದರೆ ಚೇಂಜ್ ಮಾಡಿ. ಮೊದಲು ಚೆಕ್ ಮಾಡಿ ನಂತರ ಮಾಡಿ. ಹೀಗಲ್ಲ ಮೊದಲು ಮಾಡಿ ಬಿಟ್ಟೆ ನಂತರ ಚೆಕ್ ಮಾಡುತ್ತೇನೆ – ಇದು ಸರಿಯಾಗಿಲ್ಲ ಎಂದು. ಜ್ಞಾನಿಯ ಲಕ್ಷಣವಾಗಿದೆ ಮೊದಲು ಯೋಚಿಸಿ ನಂತರ ಮಾಡಿ ಅಜ್ಞಾನಿಯ ಲಕ್ಷಣವಾಗಿದೆ ಮೊದಲು ಮಾಡಿ ನಂತರ ಯೋಚಿಸಿ ಹಾಗಾದರೆ ನೀವು ಜ್ಞಾನಿ ತೂ ಆತ್ಮ ಆಗಿದ್ದೀರಲ್ಲವೇ. ಅಥವಾ ಆಗಾಗ ಭಕ್ತರಾಗಿ ಬಿಡುವಿರೋ? ಪಂಜಾಬ್ ನವರು ಬಹದ್ದೂರ್ ಆಗಿದ್ದೀರಲ್ಲವೇ? ಮನಸ್ಸಿನಿಂದಲೂ ಬಹದ್ದೂರ್. ಚಿಕ್ಕ ಮಾಯೆ ಇರುವೆಯ ರೂಪದಲ್ಲಿ ಬಂದರೆ ಗಾಬರಿಯಾಗುವುದಿಲ್ಲವಲ್ಲ. ಚಾಲೆಂಜ್ ಮಾಡುವವರಾಗಿದ್ದೀರಿ. ಸ್ಟೂಡೆಂಟ್ ಎಂದಾದರೂ ಪೇಪರ್‌ನಿಂದ ಗಾಬರಿಯಾಗುತ್ತಾರೆಯೇ ಅಂದ ಮೇಲೆ ನೀವು ಬಹದ್ದೂರ್ ಆಗಿದ್ದೀರಾ ಅಥವಾ ಚಿಕ್ಕ ಪೇಪರಿನಿಂದ ಗಾಬರಿಯಾಗುವವರಾಗಿ ದ್ದೀರಾ? ಯಾರು ಯೋಗ್ಯ ಸ್ಟೂಡೆಂಟ್ಸ್ ಗಳಾಗಿರುತ್ತಾರೆ ಅವರು ಆಹ್ವಾನ ಮಾಡುತ್ತಾರೆ ಬೇಗ ಪೇಪರ್ ಬಂದರೆ ನಾವು ಮುಂದುವರೆಯಬಹುದು. ಯಾರು ಬಲಹೀನರಾಗಿರುತ್ತಾರೆ ಅವರು ಯೋಚಿಸುತ್ತಾರೆ ಡೇಟ್ ಮುಂದುವರೆಯಲಿ ಎಂದು ಹಾಗಾದರೆ ನೀವಂತೂ ಬುದ್ಧಿವಂತರಾಗಿದ್ದೀರಿ ಅಲ್ಲವೇ.

ಈ ನಿಶ್ಚಯ ಪಕ್ಕಾ ಇರಲಿ - ನಾವೇ ಕಲ್ಪ ಕಲ್ಪದ ವಿಜಯಿ ಆಗಿದ್ದೇವೆ ಹಾಗೂ ಮತ್ತೆ ಮತ್ತೆ ಆಗುತ್ತೇವೆ. ಇಷ್ಟು ಪುರುಷಾರ್ಥ ಮಾಡಿದ್ದೀರಾ? ನೀವು ಆಗದಿದ್ದರೆ ಮತ್ತೆ ಯಾರು ಆಗುತ್ತಾರೆ? ತಾವೇ ವಿಜಯಿಗಳಾಗಿದ್ದೀರಿ, ವಿಜಯೀ ಆಗುತ್ತೀರಿ, ಹಾಗೂ ವಿಜಯೀ ಆಗಿಯೇ ಇದ್ದೀರಿ. "ವಿಜಯೀ ಶಬ್ದ ಹೇಳುತ್ತಲೇ ಎಷ್ಟು ಖುಷಿಯಾಗುತ್ತದೆ ಚಹರೆ ಬದಲಾಗಿ ಬಿಡುತ್ತದೆ. ಯಾರು ಸದಾ ವಿಜಯಿಯಾಗಿರುತ್ತಾರೆ ಅವರು ಸದಾ ಖುಷಿಯಾಗಿರುತ್ತಾರೆ. ಆದ್ದರಿಂದಲೇ ಯಾವಾಗಲೇ

ಯಾರೇ ಯಾವುದೇ ಕ್ಷೇತ್ರದಲ್ಲಿ ಯಾವುದೇ ಪ್ರಕಾರದ ವಿಜಯಿಯಾಗುತ್ತಾರೆಂದರೆ ವಿಜಯದ ನಗಾರಿಯನ್ನು ಬಾರಿಸುತ್ತಿರುತ್ತಾರೆ. ನೀವಂತೂ ಸದಾ ನಗಾರಿಯನ್ನು ಹೊಡೆಯುತ್ತಿರುತ್ತೀರಿ. ಎಂದಿಗೂ ಖುಷಿಯ ನಗಾರಿ ಬಂದ್ ಆಗಬಾರದು. ಅರ್ಧ ಕಲ್ಪ ಅಳುವುದು ಬಂದ್ ಆಗಿ ಹೋಯಿತು. ಎಲ್ಲಿ ಖುಷಿಯ ನಗಾರಿ ಮೊಳಗುತ್ತದೆಯೋ ಅಲ್ಲಿ ಅಳು ಇರುವುದಿಲ್ಲ. ಒಳ್ಳೆಯದು.

ರಿವೈಸ್ ಕೋರ್ಸ್ 20-12-1992.

***ಅಜ್ಞಾಕಾರಿಯೇ ಸರ್ವಶಕ್ತಿಗಳಿಗೆ ಅಧಿಕಾರಿ***

ಶಕ್ತಿಗಳು ಶಸ್ತ್ರಗಳಾಗಿವೆ ಮತ್ತು ಶಸ್ತ್ರ ಯಾವ ಸಮಯಕ್ಕಾಗಿ? ಶಸ್ತ್ರ ಸದಾ ಸಮಯಾನುಸಾರ ಕಾರ್ಯಕ್ಕೆ ಉಪಯೋಗಿಸಲಾಗುತ್ತದೆ. ಯಥಾರ್ಥ ಸ್ಮೃತಿ ಅರ್ಥಾತ್ ಸರ್ವಶಕ್ತಿ ಸಂಪನ್ನ. ಸದಾ ಶಕ್ತಿಶಾಲಿ ಶಸ್ತ್ರವಿರಬೇಕು. ಪರಿಸ್ಥಿತಿ ರೂಪಿ ಶತ್ರು ಬಂದಾಗ ಶಸ್ತ್ರ ಕೆಲಸಕ್ಕೆ ಬಾರದಿದ್ದರೆ ಇವರಿಗೆ ಏನು ಹೇಳುತ್ತಾರೆ? ಶಕ್ತಿಶಾಲಿ ಅಥವಾ ಶಸ್ತ್ರಧಾರಿ ಎಂದು ಹೇಳುತ್ತಾರೆಯೇ? ಪ್ರತಿಯೊಂದು ಕರ್ಮದಲ್ಲಿ ಸ್ಮೃತಿ ಅರ್ಥಾಥ್ ಸಫಲತೆ ಇರಬೇಕು. ಇವರನ್ನೇ ಕರ್ಮ ಯೋಗಿ ಎಂದು ಕರೆಯಲಾಗುತ್ತದೆ. ಕೇವಲ ಕುಳಿತುಕೊಂಡು ಯೋಗ ಮಾಡುವವರಲ್ಲ ತಮ್ಮ ಯೋಗದ ಹೆಸರು ಕುಳಿತಿದ್ದ ಯೋಗಿ ಎಂದೋ ಅಥವಾ ಕರ್ಮಯೋಗಿ ಎಂಬ ಹೆಸರಿದೆಯೋ? ಕರ್ಮಯೋಗಿ! ಅಲ್ಲವೇ, ನಿರಂತರ ಕರ್ಮವಿದೆ ಮತ್ತು ನಿರಂತರ ಕರ್ಮ ಯೋಗಿಗಳು ಕರ್ಮದ ವಿನಃ ಒಂದು ಸೆಕೆಂಡ್ ಸಹ ಇರಲು ಸಾಧ್ಯವಿಲ್ಲ. (ಮರಗಿರಬಹುದು ಅದು ಸಹ ಒಂದು ಕರ್ಮವೇ ತಾನೇ) ಹೇಗೆ ತಾವು ಕರ್ಮದ ವಿನಃ ಒಂದು ಸೆಕೆಂಡ್ ಕೂಡಾ ಇರಲು ಸಾಧ್ಯವಿಲ್ಲವೋ ಹಾಗೆಯೇ ಪ್ರತಿಯೊಂದು ಕರ್ಮ ಯೋಗದ ವಿನಃ ಮಾಡಲು ಸಾಧ್ಯವಾಗುವುದಿಲ್ಲ ಅವರನ್ನೇ ಕರ್ಮಯೋಗಿ ಎಂದು ಕರೆಯಲಾಗುತ್ತದೆ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸರ್ವಶಕ್ತಿಗಳ ದಾತ, ಸರ್ವ ಶಕ್ತಿವಂತನಾದ ತಂದೆಯಿಂದ ಸರ್ವ ಶಕ್ತಿಗಳ ವಾರಸತ್ವವನ್ನು ಪಡೆದಿದ್ದೇನೆ.

2. ನಾನು ಸರ್ವ ಶಕ್ತಿಗಳ ಅಧಿಕಾರದಿಂದ ಸಮಯಾನುಸಾರ ಯಾವ ಶಕ್ತಿಯನ್ನು ಆದೇಶಿಸಿದರೆ ಆ ಶಕ್ತಿ ರಚನೆಯ ರೂಪದಲ್ಲಿ ಮಾಸ್ಟರ್ ರಚಯಿತ ಆದೇಶಿಸಿದಾಕ್ಷಣ ಹಾಜರಾಗುತ್ತಿದೆ.

3. ನಾನು ಪ್ರತಿಯೊಂದು ಸಮಯದಲ್ಲಿ ತಂದೆಯ ಶ್ರೀಮತವನ್ನು ಆಗಲಿ ಪ್ರಭು! ಎಂದು ಆಜ್ಞೆಯನ್ನು ಚಿತ್ತ! ಪ್ರಭು ಚಿತ್ತ! ಎನ್ನುತ್ತಾ ಆಜ್ಞೆಯನ್ನು ಪ್ರತ್ಯಕ್ಷ ಮಾಡಿರುವ ಫಲವಾಗಿ ನನ್ನ ಮುಂದೆ ಪ್ರತಿಯೊಂದು ಶಕ್ತಿ ಕೂಡ ಚಿತ್ತ! ಮಾಸ್ಟರ್ ಪ್ರಭು ಚಿತ್ತ! ಎಂದು ಪ್ರತ್ಯಕ್ಷವಾಯಿತು.

4. ನಾನು ಸರ್ವಶಕ್ತಿಗಳಿಗೆ ಅಧಿಕಾರಿ.

5. ನಾನು ಸ್ವಯಂ ಅನ್ನು ಸದಾ ನಿರ್ಮಾಣಚಿತ್ತ ಎಂಬ ವಿಶೇಷತೆಯಲ್ಲಿ ನಡೆಸುತ್ತಾ ಸಹಜ ಸಫಲತೆಯನ್ನು ಪಡೆದಿದ್ದೇನೆ.

6. ನಾನು ಸರ್ವರಿಗೆ ಸಂದೇಶವನ್ನು ಕೊಟ್ಟು, ಸಮಯವನ್ನು ಸಂಪನ್ನ ಮಾಡಿ ಸಮಯದ ನಿರೀಕ್ಷಣೆಯನ್ನು ಪೂರ್ತಿ ಮಾಡಿದ್ದೇನೆ.